ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು) (ಗೃಹಮಂತ್ರಿಗಳ ಪರವಾಗಿ): ಗೃಹ ಮಂತ್ರಿಗಳಿಂದ ಈ ವಿಚಾರದಲ್ಲಿ ಅಧಿವೇಶನ ಮುಗಿಯುವುದರೊಳಗೆ ಹೇಳಿಕೆ ಮಾಡಿಸುತ್ತೇನೆ.

ವಿಷಯ: (ಇ) ವಿರಾಜಪೇಟೆ ತಾಲ್ಲೂಕಿನ ಟಿ.ಶೆಟ್ಟಗೇರಿ ಗ್ರಾಮಕ್ಕೆ ಪ್ರೌಢಶಾಲೆ ತೆರೆಯಲು ಅನುಮತಿ ನೀಡದಿರುವ ಬಗ್ಗೆ.

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಜುಲ್ಫೀಕರ್ ಹಷ್ಮಿಯವರು ಮಂತ್ರಿಗಳು ಇಲ್ಲವೆಂದು ವಿಷಯ ಪ್ರಸ್ತಾಪಿಸಿದ್ದು, ನನ್ನದೂ ಅದೇ ಹಣೆಬರಹ. ಪ್ರತಿಯೊಂದು ವಿಚಾರದಲ್ಲೂ ಮಾತನಾಡಲು ಎದ್ದರೆ, ಸಂಬಂಧಪಟ್ಟ ಮಂತ್ರಿಗಳಿರುವುದಿಲ್ಲ. ಏಕೆಂದರೆ, ಗೋವಿಂದೇಗೌಡರ ಬಗ್ಗೆ ನಾನು ಆ ಮಾತು ಹೇಳಲಿಷ್ಟಪಡುವುದಿಲ್ಲ. ಆದರೂ, ಇವತ್ತು ಬರಬೇಕಿತ್ತು. ಏಕೆ ಅವರು ಬಂದಿಲ್ಲವೆಂಬ ವಿಷಯ ಗೊತ್ತಾಗಲಿಲ್ಲ. ಇದು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿದ್ದು. ಇದನ್ನು ಪ್ರಸ್ತಾಪ ಮಾಡಬೇಕೆ? ಬೇಡವೆ? ಇದರಲ್ಲಿ 50 ವಿದ್ಯಾರ್ಥಿಗಳ ಭವಿಷ್ಯ ಅಡಗಿದೆ.

ಶ್ರೀ ಡಿ.ಮಂಜುನಾಥ್ (ಅರಣ್ಯ ಮಂತ್ರಿಗಳು): ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ. ತಾವು ವಿಷಯ ಪ್ರಸ್ತಾಪಿಸಿ, ನಾವು ತಿಳಿಸುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜ್: 9ನೇ ತಾರೀಖಿನೊಳಗೆ ನಾವು ಕೂಡ ಸರ್ಕಾರದ ವತಿಯಿಂದ ನಿಮಗೆ ಹೇಳಿಕೆ ಕೊಡುತ್ತೇವೆಂದು ಉತ್ತರ ಹೇಳಬಹುದು. ಮಂತ್ರಿಗಳಿಲ್ಲದಿದ್ದರೂ ಪ್ರಸ್ತಾಪಿಸಬೇಕೆಂದರೆ ಮಾಡುತ್ತೇನೆ. ವಿರಾಜಪೇಟೆ ತಾಲ್ಲೂಕಿನ ಟಿ.ಶೆಟ್ಟಗೇರಿ ಗ್ರಾಮದಲ್ಲಿ ಸರ್ಕಾರದ ವತಿಯಿಂದ ಪ್ರೌಢಶಾಲೆ ತೆರೆಯಲು ಪ್ರಸ್ತಾವನೆಯನ್ನು ಖಾಸಗಿಯವರು ಮುಂದೆ ಬಂದು 1 ಲಕ್ಷದ 20 ಸಾವಿರ ರೂಪಾಯಿಗಳ ಚೆಕ್‌ನ್ನು ಸರ್ಕಾರದ ವತಿಯಿಂದ ಡೆಪಾಸಿಟ್ ಮಾಡಿದರೆ ಮತ್ತು ಪ್ರೌಢಶಾಲೆಗೆ ಅವಶ್ಯಕವಾದ 4 ಎಕರೆ ಜಮೀನನ್ನು ಒದಗಿಸುತ್ತೇವೆಂದರೆ, ಪ್ರೌಢಶಾಲೆ ನಡೆಸಲು ಬೇಕಾದ ಪೀಠೋಪಕರಣಗಳನ್ನು ಒದಗಿಸುತ್ತೇವೆಂದರೆ, ನಾವು 1999-2000ನೇ ಸಾಲಿನಲ್ಲಿ ಪ್ರೌಢಶಾಲೆ ತೆರೆಯಲು ಅನುಮತಿ ಕೊಡುತ್ತೇವೆಂಬುವ ಪ್ರಸ್ತಾವನೆಯನ್ನು ಜಾಹೀರಾತಿನ ಮೂಲಕ ಶಿಕ್ಷಣ ಇಲಾಖೆಯವರು ಅಲ್ಲಿನ ಸ್ಥಳೀಯ ಗ್ರಾಮಸ್ಥರಿಂದ ಪ್ರಸ್ತಾವನೆಯನ್ನು ಸ್ವೀಕಾರ ಮಾಡಿದರು. ಆ ಪ್ರಸ್ತಾವನೆ ಬೆಂಗಳೂರಿಗೆ ಬಂದು, ಅದರ ಬಗ್ಗೆ ಶಿಕ್ಷಣ ಇಲಾಖೆಯವರು ತಮ್ಮದೇ ಆದ ರೀತಿಯಲ್ಲಿ ಶಿಫಾರಸ್ಸು ಮಾಡಿದರು. ಆದರೆ, ದುರಂತವೇನೆಂದರೆ, ಇದುವರೆಗೆ ಅನುಮತಿ ಸಿಕ್ಕಲಿಲ್ಲ. ಅನುಮತಿ ಸಿಗದಿರುವುದರಿಂದ, ಈ ವಿಚಾರ ತಿಳಿಯದಿರುವ ಆ ಗ್ರಾಮಸ್ಥರು ಮತ್ತು

ಅಲ್ಲಿನ ಪೋಷಕರು ತಮ್ಮ ಮಕ್ಕಳನ್ನು ತಮ್ಮ ಗ್ರಾಮದಲ್ಲೇ ಪ್ರೌಢಶಾಲೆ ಬರುವ ಸಂಭವವಿರುವುದರಿಂದ ಸೇರಿಸಬೇಕೆಂದು ಅಂದುಕೊಂಡಿದ್ದರಿಂದ, 50 ಮಕ್ಕಳು ಇವತ್ತು ಕಾಯುತ್ತಿದ್ದಾರೆ. ಸರ್ಕಾರದ ನಿಲುವೇನು? ನನಗೆ ಸ್ಪಷ್ಟ ಉತ್ತರ ಬೇಕಾಗಿದೆ. ನೀವು ಪ್ರಸ್ತಾವನೆ ತರಿಸಿಕೊಂಡಿರಿ, 1 ಲಕ್ಷದ 20 ಸಾವಿರ ಡಿಪಾಸಿಟ್ ಕಟ್ಟಿಸಿಕೊಂಡಿರಿ, 4 ಎಕರೆ ಜಮೀನಿದೆ ಎಂದು ಘೋಷಣೆ ಮಾಡಿ ಮತ್ತು ಅದಕ್ಕೆ ಸಂಬಂಧಿಸಿದ ಪತ್ರಗಳನ್ನು ತರಿಸಿಕೊಂಡಿರಿ, ಶಿಕ್ಷಣ ಇಲಾಖೆ ಮೂಲಕ ಅದನ್ನು ಸರ್ವೆ ಮಾಡಿಸಿ ಅಲ್ಲಿ ಪ್ರೌಢಶಾಲೆ ತೆರೆಯಲು ಅನುಮತಿ ಕೊಡಬಹುದೆನ್ನುವ ಶಿಫಾರಸ್ಸು ತೆಗೆದುಕೊಂಡಿರಿ. ಆದರೆ, ಈಗಾಗಲೇ ಜೂನ್ ಮುಗಿದು, ಜುಲೈ ತಿಂಗಳು ಬರುತ್ತಿದೆ. ಆ ಮಕ್ಕಳು ಎಲ್ಲಿ ಹೋಗಬೇಕು? ಪೋಷಕರು ಕಂಗಾಲಾಗಿದ್ದಾರೆ. ಸರ್ಕಾರದ ನಿಲುವೇನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾರು ಇದಕ್ಕೆ ಉತ್ತರ ಕೊಡುತ್ತಾರೆ?

ಶ್ರೀ ಬಿ.ಎ.ಮೊಯಿದ್ದೀನ್ (ಉನ್ನತ ಶಿಕ್ಷಣ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ): ಮಂತ್ರಿಗಳು ಬರುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್: 50 ಮಕ್ಕಳ ಭವಿಷ್ಯ ಇದರಲ್ಲಿ ಅಡಗಿದೆ.

ಉಪಾಧ್ಯಕ್ಷರು: ನೋ ಕ್ಲಾರಿಫಿಕೇಷನ್.

ಶ್ರೀ ಹೆಚ್.ಡಿ.ಬಸವರಾಜ್: ಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು. 1999-2000ನೇ ಇಸವಿಯಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆ ತೆರೆಯಲು ಜಾಹೀರಾತಿನ ಮೂಲಕ ಪ್ರಸ್ತಾವನೆ ಕೇಳಿದರು. ಅವರು ನಿಬಂಧನೆಗಳನ್ನು ಕೊಟ್ಟರು.

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಯಾವ ಪತ್ರಿಕೆಯಲ್ಲಿ ಬಂದಿದೆ? ನನಗೆ ಗೊತ್ತಿರುವ ಹಾಗೆ, ಜಾಹೀರಾತು ಕೊಟ್ಟಿರಲಿಲ್ಲ. ಆದರೆ, ಸರ್ಕಾರದ ನೀತಿಯೇನೆಂದರೆ, ಪ್ರಸ್ತುತ ವರ್ಷದಲ್ಲಿ ಸರ್ಕಾರಿ ಪ್ರೌಢಶಾಲೆ ಅಥವಾ ಪ್ರೀ-ಯುನಿವರ್ಸಿಟಿ ಕಾಲೇಜಿಗಾಗಲಿ ಅನುಮತಿ ಕೊಡಬಾರದೆಂದು ಒಂದು ತಾತ್ವಿಕ ತೀರ್ಮಾನ ತೆಗೆದುಕೊಂಡಿದ್ದೇವೆ. ಮಂತ್ರಿಗಳು ಬಂದ ಮೇಲೆ ಇನ್ನೂ ವಿವರವಾಗಿ ಹೇಳುತ್ತಾರೆ. ನನಗೆ ಗೊತ್ತಿರುವ ಹಾಗೆ ಜಾಹೀರಾತನ್ನು ಎಲ್ಲಿಯೂ ಕೊಟ್ಟಿರಲಿಲ್ಲ. ನನಗೆ ಗೊತ್ತಿರುವ ಹಾಗೆ, ಕೊಡಿ ಎಂದು ಆ ರೀತಿ ಮಾಹಿತಿಯನ್ನು ಕೇಳಿರಲಿಲ್ಲ.

ಶ್ರೀ ಹೆಚ್.ಡಿ.ಬಸವರಾಜ್: ಈ ವಿಷಯದಲ್ಲಿ ಮಂತ್ರಿಗಳು, I want to bring it on record. ಸತ್ಯ ಕಡತಕ್ಕೆ ಹೋಗಬೇಕು.

ಉಪಾಧ್ಯಕ್ಷರು: ನೋ ಕ್ಲಾರಿಫಿಕೇಷನ್.

ಶ್ರೀ ಹೆಚ್.ಡಿ.ಬಸವರಾಜ್: 1 ಲಕ್ಷದ 20 ಸಾವಿರ ರೂಪಾಯಿ ಕಟ್ಟಿಸಿಕೊಂಡಿದ್ದು ಸತ್ಯವೆ?

ಶ್ರೀ ಬಿ.ಎ.ಮೊಯಿದ್ದೀನ್: ಹೈಸ್ಕೂಲಿಗೆ ಅನುಮತಿ ಕೊಡಬೇಕಾದರೆ ಇವೆಲ್ಲಾ ಅವಶ್ಯಕತೆಗಳಿರಬೇಕು.

ಶ್ರೀ ಹೆಚ್.ಡಿ.ಬಸವರಾಜ್: ಕಾರ್ಯದರ್ಶಿಯವರು ಶಿಫಾರಸ್ಸು ಮಾಡಿದ್ದಾರೆ.

ಉಪಾಧ್ಯಕ್ಷರು: ನೋ ಕ್ಲಾರಿಫಿಕೇಷನ್.

ಶ್ರೀ ಸಿ.ಭೈರೇಗೌಡ: ಎಲ್ಲದಕ್ಕೂ ಶಿಫಾರಸ್ಸು ಬರುತ್ತವೆ. ಆದರೆ, ತೀರ್ಮಾನ ಮಾಡುವುದು ಸರ್ಕಾರ. ಸರ್ಕಾರದ ತಾತ್ವಿಕ ತೀರ್ಮಾನವೇನಿದೆ ಎಂಬುದನ್ನು ಹೇಳಿದ್ದೇನೆ. ಶಿಫಾರಸ್ಸು ಮಾಡಿದ್ದೆಲ್ಲವನ್ನೂ ಸರ್ಕಾರ ಒಪ್ಪಬೇಕೆಂದಿಲ್ಲ;

ಶ್ರೀ ಹೆಚ್.ಡಿ.ಬಸವರಾಜ್: ಪ್ರಸ್ತಾವನೆಯನ್ನು ಏಕೆ ಶಿಕ್ಷಣ ಇಲಾಖೆಯವರು ಸ್ವೀಕರಿಸಿದರು?

ಶ್ರೀ ಸಿ.ಭೈರೇಗೌಡ: ಮಾಡಿಲ್ಲ. ನನಗೆ ಗೊತ್ತಿರುವ ಹಾಗೆ, ಆ ರೀತಿ ಜಾಹೀರಾತು ನೀಡಿಲ್ಲ.

(ಗೊಂದಲ)

ವಿಷಯ: (ಈ) ಮಂಗಳೂರು, ಉಲ್ಲಾಳ, ಶಿವಮೊಗ್ಗ ಮತ್ತು ದಾವಣಗೆರೆಯಲ್ಲಿ ಇತ್ತೀಚೆಗೆ ಕೆ.ಇ.ಬಿ.ಯವರು ಹೊಸ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಿರುವುದು.

+ ಶ್ರೀ ಕೆ.ಜಯರಾಮ ಶೆಟ್ಟಿ (ಉಲ್ಲಾಳ): ಸನ್ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಮತ್ತು ಉಲ್ಲಾಳ ಹಾಗೂ ಶಿವಮೊಗ್ಗ, ದಾವಣಗೆರೆಯಲ್ಲಿ ಇತ್ತೀಚೆಗೆ ಕೆ.ಇ.ಬಿ.ರವರು ಹೊಸ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಿದ್ದಾರೆ. ವಿಶೇಷವಾಗಿ ನನ್ನ ಕ್ಷೇತ್ರವಾದ ಉಲ್ಲಾಳದ ಎಲ್ಲಾ ಕಡೆಗಳಲ್ಲಿ ಹಳೆಯ ಮೀಟರ್‌ಗಳನ್ನು ತೆಗೆದು ಹೊಸ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಿದ್ದಾರೆ. ಇಲ್ಲಿ ಮತ್ತೊಂದು ವಿಶೇಷ ಏನೆಂದರೆ, ಸುಮಾರು ಮೂರ್ನಾಲ್ಕು ತಿಂಗಳ ಕೆಳಗೆ ಹಳೆಯ ಮೆಕಾನಿಕಲ್ ಮೀಟರ್‌ಗಳನ್ನು ಹಾಕಿದ್ದರೂ ಕೂಡ ಪುನಃ ನಾಲ್ಕೈದು ತಿಂಗಳ ನಂತರ ಹೊಸ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಿದ್ದಾರೆ. ಈ ಎಲೆಕ್ಟ್ರಾನಿಕ್ ಮೀಟರ್‌ಗಳಿಗೆ 980 ರೂಪಾಯಿಗಳ ಡಿಪಾಜಿಟ್ ಹಣವನ್ನು ಗ್ರಾಹಕರಿಂದ ವಸೂಲ್ಮಾಡುತ್ತಿದ್ದಾರೆ. ಹೊಸದಾಗಿ ಹಾಕಿರತಕ್ಕಂಥ ಎಲೆಕ್ಟ್ರಾನಿಕ್ ಮೀಟರ್‌ಗಳು ಬಹಳ ಸೆನ್ಸಿಟೀವ್. ಏಕೆಂದರೆ, ಝೀರೋ ವೋಲ್ಟ್ಸ್ ಬಲ್ಬ್ ಹಾಕಿದರೆ